

ಮರಿಗಳಿಗೆ ಗುಟುಕು ನೀಡುತ್ತಿರುವ ಅಪ್ಪ ಮತ್ತು ಅಮ್ಮ

# ಬೇಲಿಚಟಕದ ಬಾಣಂತನ

**ಚೆಕ್... ಚೆಕ್... ಎನ್ನುತ್ತ ಪುಟಾಣಿಗಳಿಗೆ ತುತ್ತು ನೀಡುತ್ತಿದ್ದ ಬೇಲಿಚಟಕ ಅಪ್ಪ–ಅಮ್ಮನ ಒಲುಮೆ ಪ್ರಕೃತಿಯ ಸೋಜಿಗಕ್ಕೊಂದು ಸುಂದರ ಸಾಕ್ಷ್ಯದಂತಿತ್ತು. ಮನೆಯ ತಾರಸಿಯ ಸ್ವಿಚ್ ಬೋರ್ಡ್‌ನ ಖಾಲಿ ಜಾಗದಲ್ಲಿ ಸಂಸಾರ ಹೂಡಿದ್ದ ಜೋಡಿಯ ಕಥನವಿದು.**

**■ ಎಸ್. ಶಿಶುಪಾಲ**

ಅದೊಂದು ಮುಂಜಾನೆ ತಾರಸಿ ತೋಟದಲ್ಲಿದ್ದ ಗಿಡಗಳಿಗೆ ನೀರು ಹಾಕುತ್ತಿದ್ದೆ. ಅಲ್ಲಿಯೇ ಓವರ್‌ಹೆಡ್ ಟ್ಯಾಂಕಿನ ಕೆಳಭಾಗದಲ್ಲಿದ್ದ ಹಂಚುಗಳ ಕೆಳಗೆ ಸ್ವಲ್ಪ ನಾರು–ಹುಲ್ಲು ಬಿದ್ದಿರುವಂತೆ ಕಂಡಿತು. ಇದ್ಯಾವುದೋ ಹಕ್ಕಿ ತಂದು ಹಾಕಿದೆಯಲ್ಲಾ ಎಂದುಕೊಳ್ಳುತ್ತಾ ಆಚೀಚೆ ನೋಡಿದೆ. ಅಲ್ಲೇ ಮೇಲ್ಭಾಗದಲ್ಲಿದ್ದ ಸ್ವಿಚ್ ಬೋರ್ಡ್‌ನಲ್ಲಿ, ಒಂದು ಸ್ವಿಚ್ ಇಲ್ಲದ ಜಾಗದಲ್ಲಿ ನಾರು–ಹುಲ್ಲುಗಳನ್ನು ಒತ್ತೊತ್ತಾಗಿ ಇಟ್ಟಿರುವುದು ಕಂಡುಬಂತು.

ಮೆಲ್ಲನೆ ಇಣುಕಿದರೆ ಕತ್ತಲಲ್ಲಿ ಏನೂ ಕಾಣಲಿಲ್ಲ. ಅತ್ತಿತ್ತ ನೋಡಿದರೆ ಮುನಿಯ, ಪಿಕಳಾರ ಹಕ್ಕಿಗಳು ಕಂಡುಬಂದವು. ಅವುಗಳ ಗೂಡಿನ ಬಗ್ಗೆ ಮಾಹಿತಿಯಿದ್ದ ನಾನು, ಇದ್ಯಾವುದೋ ಬೇರೆ ಹಕ್ಕಿಯ ಗೂಡು ಎಂದು ಅಂದಾಜಿಸುತ್ತಾ ಕೆಳಗಿಳಿದು ಬಂದೆ. ಮಾರನೇ ದಿನ ಕ್ಯಾಮೆರಾದೊಂದಿಗೆ ಹೋಗಿ ಅನತಿ ದೂರದಲ್ಲಿ ಕುಳಿತು ಜೂಮ್ ಮಾಡಿ ನೋಡಿದರೆ, ಒಳಗೊಂದು ಹಕ್ಕಿ ಕುಳಿತಿದೆ!

ಒಳಗೆ ಕತ್ತಲಿದ್ದುದರಿಂದ ಯಾವ ಹಕ್ಕಿ ಎಂಬುದೇ ಅನುಮಾನ. ಸ್ವಲ್ಪ ಹೊತ್ತಿಗೆ ನನ್ನ ಇರುವಿಕೆಯನ್ನು ಗಮನಿಸಿದ ಹಕ್ಕಿ ಪುರ್ರನೆ ಹಾರಿದಾಗ ತಿಳಿಯಿತು, ಅದು ಹೆಣ್ಣು ಬೇಲಿಚಟಕ ಹಕ್ಕಿಯೆಂದು. ಸದ್ದಿಲ್ಲದೆ ಹಿಂದೆ ಬಂದ ನಾನು ಎರಡು ದಿನ ತಾರಸಿ ಗಿಡಗಳಿಗೆ ನೀರುಣಿಸಲಿಲ್ಲ. ಮೂರನೇ ದಿನ ನೋಡಿದರೆ, ಯಾವುದೇ ಹಕ್ಕಿ ಇರಲಿಲ್ಲ. ಇದೆಂಥ ಅಚಾತುರ್ಯವಾಯಿತೆಂದು ಗೂಡಿನ ಒಳಗೆ ಇಣುಕಿದರೆ, ಪರಮಾಶ್ಚರ್ಯ.

ನಾಲ್ಕು ನೀಲಿ–ಬಿಳಿ ಬಣ್ಣದ ಮೊಟ್ಟೆಗಳ ಮೇಲೆ ಕೆಂಪುಮಿಶ್ರಿತ ಕಂದು ಮಚ್ಚೆಗಳು ಮತ್ತು ಚುಕ್ಕಿಗಳು ಕಾಣಿಸಿದವು. ಲಗುಬಗೆಯಲ್ಲಿ ಚಿತ್ರ ತೆಗೆದು ಕೆಳಗಿಳಿದು ಬಂದೆ. ಇದರಿಂದ ಉತ್ತೇಜಿತನಾದ ನನ್ನ ದಿನಚರಿಯೇ ಬದಲಾಯಿತು. ಮರುದಿನ ತಂದೆ–ತಾಯಿಯರ ಭೇಟಿ ಕಾದಿತ್ತು. ಗಿಡಗಳಿಗೆ ನೀರುಣಿಸಲು ಹೋದರೆ ಅಲ್ಲಿಯೇ ಇದ್ದ ತಂತಿ ಮೇಲೆ ಕುಳಿತು ಗಾಬರಿಯಿಂದ ಇಬ್ಬರ ಕೂಗಿನ ಚಡಪಡಿಕೆ. ಆದಷ್ಟು ಬೇಗನೆ ಗಿಡಗಳಿಗೆ ನೀರು ಹಾಕಿ ಕೆಳಗಿಳಿದು ಬರುವುದೇ ಆಯಿತು. ಮತ್ತೆರಡು ದಿನ ಕಳೆದಾಗ, ಹೆಣ್ಣು ಗೂಡಿನ ಒಳಗೆ ಕುಳಿತು ಕಾವು ಕೊಡುತ್ತಿದ್ದಾಳೆ ಮತ್ತು ಗಂಡು ಹಕ್ಕಿ ಹೊರಗೆ ಕಾಯುತ್ತಿದ್ದಾನೆ. ನಾನು ಮೇಲೆ ಹೋದ ಕೂಡಲೇ ಗಂಡಿನ ಚಡಪಡಿಕೆ ಕಾಣುತ್ತಿತ್ತು. ಗೂಡಿನಿಂದ ಅನತಿ ದೂರದಲ್ಲಿ ನಿಂತು ಕಾವು ಕೊಡುತ್ತಿದ್ದ ಹೆಣ್ಣಿನ ಚಿತ್ರ ಮತ್ತು ಕಾಯುತ್ತಿದ್ದ ಗಂಡಿನ ಚಿತ್ರ ತೆಗೆದಿದ್ದಾಯಿತು.

ಎರಡು ದಿನಗಳಾಗುವಷ್ಟರಲ್ಲಿ ನನ್ನಿರುವಿಕೆಯಿಂದ ಅವುಗಳಿಗೆ ತೊಂದರೆಯಿಲ್ಲವೆಂಬುದನ್ನು ಅರಿತು ಹೆಚ್ಚು ಗಾಬರಿಗೊಳ್ಳುತ್ತಿರಲಿಲ್ಲ. ಸುರಕ್ಷಿತ ಭಾವ ಮೂಡುವಷ್ಟರಲ್ಲಿ ನನ್ನ ದಿನಕ್ಕೊಂದು ಬಣ್ಣದ ಬಟ್ಟೆ ನೋಡಿ ಗಲಿಬಿಲಿಗೊಳ್ಳುತ್ತಿದ್ದುದು ನಿಜ.

ಒಂದು ದಿನ ಗಂಡಿನ ಕೊಕ್ಕಿನಲ್ಲಿ ಹುಳುಗಳನ್ನು ಕಂಡೆ. ಓಹೋ... ಮೊಟ್ಟೆಯೊಡೆದು ಮರಿಗಳು ಹೊರಬಂದಿವೆ ಎಂದು ಖಾತ್ರಿಯಾಯಿತು. ಗೂಡಿನ ಹತ್ತಿರದಲ್ಲಿ ಮರಿಗಳನ್ನು ನೋಡಿದರೆ ಅವುಗಳಿಗೋ ಗಾಢ ನಿದ್ದೆ. ಇನ್ನೆರಡು ದಿನ ಕಳೆಯುವಷ್ಟರಲ್ಲಿ ಗೂಡಿನ ಹತ್ತಿರ